**ಕೃಷ್ಣೆಗೌಡ.ಟಿ.ಎಸ್.**
**ಸಂಶೋಧನಾರ್ಥಿ**
**ಡಾ.ಡಿ. ವಿ. ಗುಂಡಪ್ಪ ಕನ್ನಡ ಅಧ್ಯಯನ ಮತ್ತು**
**ಸಂಶೋಧನಾಕೇಂದ್ರ**
**ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.**

# ಬೆಳಗೆರೆ ಕೃಷ್ಣಶಾಸ್ತ್ರಿ ಅವರ – "ಯೇಗ್ದಾಗೆಲ್ಲಾ ಐತೆ"

ಕನ್ನಡದ ಮಹತ್ವದ ವ್ಯಕ್ತಿ ಜೀವನ ಕುರಿತು ಕೃತಿಗಳಲ್ಲೂ ಬೆಳಗೆರೆ ಅವರ 'ಯೇಗ್ದಾಗೆಲ್ಲಾ ಐತೆ' ಎನ್ನುವ ಕೃತಿ ಹೆಚ್ಚುಗಮರ್ನಾಹವಾಗಿದೆ. ಇದು ಶ್ರೀಮುಕುಂದೂರು ಸ್ವಾಮಿಗಳ ಬದುಕನ್ನಾದರಿಸಿ ಸಿದ್ದವಾಗಿದೆ. ಈ ಸ್ವಾಮೀಜಿ ಪ್ರಸಿದ್ಧಿಗೆ ಬಂದವರಲ್ಲ ಪ್ರಸಿದ್ಧರಿಗಿಂತ ಭಿನ್ನ ಬಗೆಯವರು. ಪ್ರಶಂಸೆಗೊಂಡ ಸ್ವಾಮಿಗಳು ನಮ್ಮೊಡನೆ ನೂರಾರು ಜನ ಇದ್ದಾರೆ. ಆದರೆ ಜೀವನಾನುಭವ, ಮುಗ್ಧ ಸ್ವಭಾವ ಮತ್ತು ನಿಜಾರ್ಥದ ಸಂತರು ನಮ್ಮಲ್ಲಿ ಕಡಿಮೆ. ಆ ಬಗೆಯವರು ನಮ್ಮ ಸಮಾಜದ ನಡುವೆ ಎಲ್ಲೊ ಅಡಗಿ ಕುಳಿತಿರುತ್ತಾರೆ. ಅಂಥವರುಗಳಲ್ಲಿ ಶ್ರೀ ಮುಕುಂದೂರು ಸ್ವಾಮಿಗಳು ಯಾರು ಎನ್ನುವುದನ್ನು ಬೆಳಗೆರೆ ಕೃಷ್ಣಶಾಸ್ತ್ರಿ ಅವರು ಯೇಗ್ದಾಗೆಲ್ಲಾ ಐತೆ ಎನ್ನುವ ಕೃತಿಯಿಂದ ಪರಿಚಯಿಸಿದ್ದಾರೆ.

ಇಂದಿನ ಯುಗದಲ್ಲಿ ನಾಲ್ಕಾರು ದೇಶಗಳನ್ನು ಸುತ್ತುವ, ವಿಮಾನದಲ್ಲಿ ಹಾರಾಡುತ್ತ ತಮ್ಮ ಪ್ರವಚನವನ್ನು ಕೊಡುತ್ತ ಟಿವಿ ಚಾನಲ್ಗಳಲ್ಲಿ ವಿಜೃಂಭಿಸುವ ಸ್ವಾಮೀಜಿಗಳಿದ್ದಾರೆ, ಮಠಾಧೀಶರಿದ್ದಾರೆ. ಇವತ್ತು ಆಧ್ಯಾತ್ಮ ಒಂದು ವ್ಯಾಪಾರವಾಗಿದೆ. ಇಲ್ಲಿ ಮಾತು ಬಂಡವಾಳವಾಗಿದೆ. ಲಾಭ ತರುವ ತಂತ್ರವಾಗುತ್ತಿದೆ. ಆಧ್ಯಾತ್ಮ ಎಂದರೆ ಜೀವನದಲ್ಲಿ ನಾವು ಹೇಗೆ ಸಂತೋಷವಾಗಿರಬಹುದು ಮತ್ತು ಆನಂದವನ್ನು ಇತರರಿಗೆ ಹೇಗೆ ಹಂಚಬಹುದು ಎಂದು ತಿಳಿಸುವ ಮಾರ್ಗ ಶಾಸ್ತ್ರಿಗಳು 'ಯೇಗ್ದಾಗೆಲ್ಲ ಐತೆ' ಪುಸ್ತಕದಲ್ಲಿ ಶ್ರೀ ಮುಕುಂದೂರು ಸ್ವಾಮಿಗಳಜೀವನದ ಪ್ರಶಂಸೆಗಳನ್ನು ಚಿತ್ರಿಸಿರುವುದು ಗಮನಾರ್ಹವಾಗಿದೆ.

ಇಂದು ಕನ್ನಡದ ಬಗ್ಗೆ ಎಲ್ಲೆಡೆ ಅಪನಂಬಿಕೆ ಇದೆ. ಇಂಗ್ಲಿಷ್ ವಶಕ್ಕೆ ಒಳಗಾಗುತ್ತಿದ್ದೇವೆ. ಪ್ರತಿಯೊಂದಕ್ಕೂ ಪಾಶ್ಚಿಮಾತ್ಯರ ಕಡೆಗೆ ನೋಡುತ್ತಿದ್ದೇವೆ. ಇಡೀ ಜಗತ್ತು ಅಮೆರಿಕದ ಕಡೆ ಗಮನಬೀರುತ್ತಿದೆ. ಈ ಸಂದರ್ಭದಲ್ಲಿ ನಮ್ಮನ್ನು ನಾವು ಅರಿಯಲು, ತಿಳಿಯಲು ನಾವು ಬೆಳೆದ ಪರಿಸರ, ನಮ್ಮ ಬದುಕು ಬದುಕಿನ ಕಲೆಗಳನ್ನು ಕಂಡುಕೊಂಡು ಜೀವಿಸಲು ಮುಂದಾಗಬೇಕು. ಆಗ ಮಾತ್ರ ಮಾನವೀಯತೆಯಿಂದ ಇರಲು ಸಾಧ್ಯವಾಗುತ್ತಿದೆ ಎನ್ನುವ ಮಹತ್ವದ ಸಂದೇಶ ಕೃತಿಗಳಲ್ಲಿ 'ಯೇಗ್ದಾಗೆಲ್ಲಾ ಐತೆ' ಎನ್ನುವ ಕೃತಿ ಬಹಳ ಮೆಚ್ಚುಗೆಗೆ ಪಾತ್ರವಾಗುವುದು.

ಸಾಮಾನ್ಯವಾಗಿ ನಾನಾ ವೇಷಗಳ ಮೂಲಕ, ಸುಳ್ಳು ಪವಾಡಗಳನ್ನು ಗಾಳಿಯಲ್ಲಿ ವಸ್ತುಗಳನ್ನು ಸೃಷ್ಟಿಸಿ ಮುಗ್ಧ ಮಾನವರನ್ನು ದಾರಿ ತಪ್ಪಿಸುವ, ತಾವೇ ದೇವರೆಂದು ಮೆರೆಯುವ ಆಷಾಢಭೂತಿ ವ್ಯಕ್ತಿಗಳೇ ತುಂಬಿರುವ ಈ

ಪ್ರಪಂಚದಲ್ಲಿ ಯೋಗ ಸಾಧನೆಯಿಂದ ಅದಮ್ಯ ಸಿದ್ಧಿಯನ್ನು ಮೈಗೂಡಿಸಿಕೊಂಡು ಕಷ್ಟ–ಕಾರ್ಪಣ್ಯದಲ್ಲಿ ನರಳುತ್ತಿರುವವರನ್ನು ಯಾವುದೇ ಪಲಾಪೇಕ್ಷೆ ಇಲ್ಲದೆ ರಕ್ಷಿಸುತ್ತಾ, ಆಡಂಬರದ ಯಾವುದೇ ಕಟ್ಟುಪಾಡುಗಳಿಗೆ, ಕಾಟಾಚಾರದ ಸಿದ್ಧಾಂತಗಳಿಗೆ ಒಳಗಾಗದೆ ಆಧ್ಯಾತ್ಮ ಸಾಧಕರಾಗಿ ಲೋಕೋದ್ಧಾರದ ಬದುಕನ್ನು ಹೊಂದಿರುವಂತ ಮಹಾತ್ಮರಲ್ಲಿ ಶ್ರೀ ಮುಕುಂದೂರು ಸ್ವಾಮಿಗಳು ಮಹತ್ವದ ವ್ಯಕ್ತಿತ್ವ ಹೊಂದಿದ್ದಾರೆ.

ಸಾಮಾನ್ಯವಾಗಿ ಸ್ವಾಮೀಜಿಗಳೆಂದೊಡನೆ ನಮ್ಮ ಮುಂದೆ ಬರುವಂತಹ ದೃಶ್ಯ ಕಾವಿದಾರಿಯಾಗಿ, ಭಂಗಿ ಸೇದುತ್ತಾ, ತಾನೇ ದೇವರೆಂದು ಪಾದಪೂಜೆ ಮಾಡಿಸಿಕೊಳ್ಳುವ ಆಷಾಢಭೂತಿ ವ್ಯಕ್ತಿಗಳು ತಮ್ಮ ಮೋಸದ ಪವಾಡಗಳಿಂದ ಜನರನ್ನು ತಮ್ಮ ಮೋಸದ ಬಲೆಗೆ ಹಾಕಿ ಹಗಲು ದರೋಡೆಗೈಯ್ಯುವ ಹುನ್ನಾರ ಇವರಿಗೆ ಚನ್ನಾಗಿ ಕರಗತವಾಗಿರುತ್ತದೆ ಹಿಪ್ನೋಟೈಸಂನ್ನೇ ಬಂಡವಾಳವಾಗಿರಿಸಿಕೊಂಡು ಗಾಳಿಯಲ್ಲಿ ವಸ್ತುಗಳನ್ನು ಸೃಷ್ಠಿಸುತ್ತಾ ಛಾಯಾಚಿತ್ರಗಳಲ್ಲಿ ಅರಿಶಿನ, ಕುಂಕುಮ, ಜೇನುತುಪ್ಪ ಭರಿಸುವಂತಹ ಇವರ ನಿಜಸ್ವರೂಪ ಬಯಲಾಗುವುದಕ್ಕೆ ಹೆಚ್ಚು ಸಮಯ ಹಿಡಿಯಲಾರದು.

ಆದರೆ ಒಬ್ಬ ಸಾಮನ್ಯನಂತೆ ಕಾಣಿಸಿಕೊಂಡು ಸರಳಜೀವನ ನಡೆಸಿ, ಆಧ್ಯಾತ್ಮದ ಸಾರವನ್ನು ನಾಲಿಗೆಯ ತುದಿಯಲ್ಲೇ ಗುಣುಗುಣಿಸುತ್ತ ತಮ್ಮ ಎಲ್ಲಾ ಪವಾಡಗಳಿಗೆ ಯೋಗಶಕ್ತಿಯೇ ಕಾರಣ ಎಂದು ಸಾರುವ ಮುಕುಂದೂರು ಸ್ವಾಮಿಗಳು ಮಹಾಸಾಧಕರೇ ಸರಿ. ಸಾಧನೆಗೆ ನಿಲುಕದ್ದು ಯಾವುದೂ ಇಲ್ಲ ಎನ್ನವಂತೆ ಯೋಗಶಕ್ತಿಯ ಸಾಧನೆಯಲ್ಲಿ ಅಪೂರ್ವವಾದುದನ್ನು ಕಟ್ಟಿಕೊಟ್ಟಿರುವ ಮುಕುಂದೂರು ಸ್ವಾಮಿಗಳು ವಿಶಿಷ್ಟ ವ್ಯಕ್ತಿತ್ವದವರಾಗಿದ್ದಾರೆ.

ಶ್ರೀಯುತ ಸ್ವಾಮಿಗಳ ಬಗ್ಗೆ ಅಭಿಮಾನದಿಂದ ಭಕ್ತಿಗೌರವದಿಂದ ಇಡೀ ಕೃತಿಯನ್ನೇ ಅವರ ಕುರಿತಾಗಿ ರಚಿಸಿರುವ ಶ್ರೀ ಬೆಳೆಗೆರೆ ಕೃಷ್ಣಶಾಸ್ತ್ರಿಗಳು ಹೇಳುವಂತೆ ಇದು ವಿಜ್ಞಾನಯುಗ, ಕಣ್ಣಲ್ಲಿಕಂಡದ್ದನ್ನು ಮಾತ್ರ ಒಪ್ಪುವ ಕಾಲ. ಆದರೆ ವಿಜ್ಞಾನದ ಕಣ್ಣಿಗೆ ಕಾಣದೇ ಉಳಿದಿರುವ, ವಿಜ್ಞಾನವು ಇನ್ನೂ ಅನ್ವೇಶಿಸಬೇಕಾಗಿರುವ ಸತ್ಯವು ಬೃಹತ್ತಾಗಿ ಉಳಿದೇ ಇದ್ದು ಈಗ ಲಭ್ಯವಾಗಿರುವುದು ಕೇವಲ ಕವಡೆಯಷ್ಟು ಮಾತ್ರ ಎಂಬ ಮಾತನ್ನು ಎಂತಹ ವಿಜ್ಞಾನಿಯೂ ಸ್ಮರಿಸಬಹುದಾಗಿದೆ.

ಈ ಭೌತಿಕ ಜಗತ್ತಿನಿಂದ ಆಚೆಗೆ ಇರುವ ಚಾಲಕ ಚೇತನವನ್ನು ಸಾಧಿಸಿ ಸಾರಿದ ಕಾಲವೊಂದು ಭರತಖಂಡದ ಹಿರಿಮೆಯಾಗಿತ್ತು ಆದರೆ ಸಹಸ್ರಾರು ವರ್ಷಗಳ ಪರಕೀಯರ ಆಳ್ವಿಕೆಗೆ ಸಿಕ್ಕಿ, ಅವರ ರೀತಿ–ರಿವಾಜುಗಳನ್ನು ಪಾಲಿಸುತ್ತಾ, ಅವರ ಮೆಚ್ಚುಗೆಗಾಗಿ ನಮ್ಮ ಜೀವನ ಪಥ ನಡೆಸಿದ ನಮ್ಮ ಅಮೂಲ್ಯವಾದ ವಿದ್ಯೆಯನ್ನು, ವಿಚಿತ್ರರೀತಿಯ ಸಾಧನೆ ಸಿದ್ಧಿಗಳನ್ನು, ಅವು ಇದ್ದವೆಂಬುದನ್ನು ಮರೆತು ಅದೆಲ್ಲವೂ ಸುಳ್ಳು ಎಂಬ ಮಟ್ಟಿಗೂ ಇಳಿದಿರುವುದು ಒಂದು ದುರಂತವೇ ಸರಿ. ಕನಿಷ್ಠ ಮಾನವೀಯ ಮೌಲ್ಯಗಳು ಧೂಳೆದ್ದು ಹೋಗಿ ಎಲ್ಲೆಲ್ಲೂ ಹಾಹಾಕಾರದ ನಗ್ನ ತಾಂಡವಕ್ಕೆ ಎಡೆಮಾಡಿದೆ. ಇಂತಹ ಸನ್ನಿವೇಶದಲ್ಲೂ ಶ್ರೀ ಮುಕುಂದೂರು ಸ್ವಾಮಿಗಳಂಥ ಸಿದ್ಧಪುರುಷರು ನಮ್ಮ ನಡುವೆ ಆಗಾಗ ಅಲ್ಲಲ್ಲಿ ಕಾಣಸಿಗುವುದು ಈ ನಾಡಿನ ಸೌಭಾಗ್ಯ ಎನ್ನುವ ಶಾಸ್ತ್ರಿಗಳ ಈ

ಮಾತು ಅತಿಶಯೋಕ್ತ ಯೆನಿಸಲಾರದು. ಯಾಕೆಂದರೆ, ಒಬ್ಬ ವ್ಯಕ್ತಿ ಸ್ತುತಿ ಶಾಸ್ತ್ರಿಯವರ ಜಾಯಮಾನವಲ್ಲ. ಸರಳ ಸಾದಾ ವ್ಯಕ್ತಿತ್ವಕ್ಕೆ ಮತ್ತೊಂದು ಹೆಸರು ಬೆಳಗೆರೆ ಕೃಷ್ಣಶಾಸ್ತ್ರಿ. ಸದಾ ತನ್ನ ಸುತ್ತಲಿನ ಪರಿಸರದ ಬಗ್ಗೆ ಅತೀವ ಕಾಳಜಿಯನ್ನು ವಹಿಸುವ ಕೃಷ್ಣಶಾಸ್ತ್ರಿಗಳು ಬರೆದಿರುವುದು ಆದರ್ಶದ ಬದುಕನ್ನಲ್ಲ ತಮ್ಮ ಜೀವನದ ಕೆಲವು ಸತ್ಯ ಘಟನೆಗಳನ್ನು ಮಾತ್ರ. ಶಾಸ್ತ್ರಿಯವರನ್ನು ಅತಿಯಾಗಿ ಸೆಳೆದ ಸ್ವಾಮಿಗಳ ವ್ಯಕ್ತಿತ್ವ ಹಾಗೂ ಅವರೊಡನೆ ಕಳೆದ ಆ ಆದ್ಯಾತ್ಮ ರಸಾನುಭವವೇ ಪ್ರಸ್ತುತ 'ಯೇಗ್ದಾಗೆಲ್ಲಾ ಐತೆ' ಕೃತಿಯ ಒಟ್ಟಂದದ ಸಾರವಾಗಿದೆ.

'ಯೇಗ್ದಾಗೆಲ್ಲಾ ಐತೆ'–ಶೀರ್ಷಿಕೆ ಮೇಲ್ನೋಟಕ್ಕೆ ಅರ್ಥಸಂದಿಗ್ಧತೆಗೆ ಉಂಟುಮಾಡುವಂತೆ ಕಂಡರೂ ಇದರ 'ಅರ್ಥ ಯೋಗದಲ್ಲಿ ಎಲ್ಲವೂ ಇದೆ' ಎಂಬುದಾಗಿದೆ. ಸ್ವಾಮಿಯವರು ತನ್ನ ಬದುಕಿನ ಎಲ್ಲಾ ರೀತಿ–ನೀತಿಗಳಿಗೂ ಕಾರಣ ಯೋಗವೆಂದು ಹೇಳುತ್ತಾ, 'ಯೇಗ್ದಾಗೆಲ್ಾ್ಲಐತೆ' ಎಂದು ಎಲ್ಲರ ಬಾಯ್ಮುಚ್ಚಿಸುತ್ತಿದ್ದರು. ಹಾಗಾಗಿ ಈ ಕೃತಿಗೆ ಅವರ ಮಾತನ್ನೇ ಶಿರೋನಾಮಯಾಗಿಸಿದ್ದಾರೆ. ಸ್ವಾಮಿಯವರ ಪ್ರಕಾರ ಕಣ್ಣುನೋಡುವಂತೆ, ಕಿವಿ ಕೇಳುವಂತೆ, ಒಂದು ಮರ ಹೂವು–ಹಣ್ಣು ಬಿಡುವಂತೆ, ಚಂದ್ರನ ಬೆಳಕು, ಸೂರ್ಯನ ಬೆಳಕು ಸಹಜವಿರುವಂತೆ ಯೋಗವು ಸಹ ತನ್ನ ಕೆಲಸವನ್ನು ಅಷ್ಟೇ ಸಹಜವಾಗಿ ನಡೆಸಿಬಿಡುತ್ತದೆ ಎಂಬುದು ಅವರ ಸ್ಪಷ್ಟ ಅರಿವಿನ ತಿಳುವಳಿಕೆಯಾಗಿದೆ.

ಸ್ವಾಮಿಯವರ ಲೋಕಾನುಭವ, ಆಧ್ಯಾತ್ಮಕ ಸೃಷ್ಟಿ ತನ್ನದೆಆದ ರೀತಿ ನೀತಿ ವಿಚಾರ–ವಿಧಾನ, ಸದಾ ನಕ್ಕುನಗಿಸುವ ಸಹಜ ಗುಣ, ಎಲ್ಲದರಲ್ಲೂ ವಿಶಿಷ್ಟವಾದ ಅವರ ವ್ಯಕ್ತಿತ್ವ ಹಾಗೂ ಯಾವುದೇ ಜಾತಿ–ಮತ ಸಂಘ, ಮೇಲು–ಕೀಳುಗಳನ್ನು ಮೀರಿ ಮಾನವೀಯ ಸಂಬಂಧ ಅರಿಯಲು ಸಾಧ್ಯವಾದುದು ತನ್ನ ಭಾಗ್ಯವೆಂದು ಶಾಸ್ತ್ರಿಗಳ ಮಾತು ಎಲ್ಲರಿಗೂ ಮಾರ್ಗದರ್ಶನದಂತಿದೆ.

ಈ ಕೃತಿಗೆ ಹಲವಾರು ಮಹಾನ್ ವಿದ್ವಾಂಸರು ಹಲವಾರು ರೀತಿಯಲ್ಲಿ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಮುನ್ನುಡಿಯಲ್ಲಿ ವಿಮರ್ಶಕರಾದ ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶರವರ ಮಾತುಗಳನ್ನು ಇಲ್ಲಿ ಪ್ರಸ್ತಾವಸುವುದಾದರೆ "ಶ್ರೀ ಮುಕುಂದೂರು ಸ್ವಾಮಿಗಳು ಕುರಿತ ಈ ಪುಸ್ತಕ ಯೋಗದಲ್ಲೇ ಎಲ್ಲಾ ಇದೆ ಎಂಬ ವಿಚಾರವನ್ನು ಹೇಳುತ್ತದೆ. ಯೋಗ ಎಂದರೆ ಸಂಬಂಧ. ಸಮಾಜಕ್ಕೂ ವ್ಯಕ್ತಿಗೂ ಇರುವ ಸಂಬಂಧ, ಮಾನವನಿಗೂ ಪಂಚಭೂತಗಳಿಗೂ ಇರುವ ಸಂಬಂಧ. ಪ್ರಸ್ತುತ ಶ್ರೀಯುತ ಶಾಸ್ತ್ರಿಯವರ ಹಾಗೂ ಮುಕುಂದೂರು ಸ್ವಾಮಿಗಳ ಸಂಬಂಧವೇ ಈ ಯೋಗ.ಶಾಸ್ತ್ರಿ ಮೇಷ್ಟ್ರು ಹಾಗೂ ಮುಕುಂದೂರು ಸ್ವಾಮಿಗಳ ಯೋಗ ತುಂಬಾ ದೊಡ್ಡದು. ಆಗ ಯೋಗದ ಒಂದು ಅವತರಣ ಈ ಕೃತಿಯ ಅಂತಃಸತ್ವವನ್ನು ಕುರಿತದ್ದಾಗಿದೆ. ಎಂಬುದು ಸ್ವಾಮಿಗಳ ಗುರ್ತಿಸದೆ ಕೃಷ್ಣಶಾಸ್ತ್ರಿಗಳನ್ನು ಗುರಿತಿಸಿರುವುದು ಅಕ್ಷರಶಃ ಸತ್ಯ, ಏಕೆಂದರೆ ಮುಕೂಂದೂರು ಸ್ವಾಮಿಗಳದ್ದೂ ಒಂದು ರೀತಿಯ ಆಧ್ಯಾತ್ಮವಾದರೆ; ಕೃಷ್ಣಶಾಸ್ತ್ರಿಗಳದ್ದು ಇನ್ನೊಂದು ರೀತಿಯ ಆದ್ಯಾತ್ಮದ ಪರಿಕಲ್ಪನೆ. ಬದುಕಿನೂದ್ದಕ್ಕೂ ಶುಬ್ರತೆಯ ಸಂಕೇತವಾಗಿಯೇ ಬದುಕಿದವರು ಕೃಷ್ಣಶಾಸ್ತ್ರಿಗಳಾಗಿದ್ದಾರೆ. ಇಂದು ಬೆಳಗೆರೆಯ ಯಾರನ್ನೆ ಕೇಳಿದರೂ ತಿಳಿದಿತು. ಕೃಷ್ಣ ಶಾಸ್ತ್ರಿಗಳ ಬೆಳಗಿನ ದಿನಚರಿ ಯೋಗದ ಪರಿಕಲ್ಪನೆಯಿಂದಲೆ ಆರಂಭವಾಗುತ್ತಿತ್ತು. ಶ್ರೀಮಾನ್ಯರನ್ನ ಕಾಣತ್ತಿದದ್ದೂ ಕೂಡ

ಯೋಗಿಗಳನ್ನು ಕಂಡಷ್ಟೇ ಭಾವನೆಯಿಂದ ಮುಕೂಂದೂರು ಸ್ವಾಮಿಗಳ ಆಧ್ಯಾತ್ಮಿಕವಾದ ಯೋಗವಾದರೆ, ಕೃಷ್ಣ ಶಾಸ್ತ್ರಿಗಳದ್ದು – ಸಾಮಾನ್ಯ ಬದುಕಿನ ಕಾಯಕ, ನೀತಿ ಸಮಾಜದ ಮೂಲಕ ಯೋಗಧ್ಯಾನಸಕ್ತರಾಗಿದ್ದವರು.

ಯಾವ ಮಹನೀಯರು ಯಾವ ಗುರುಗಳ ಸೇವೆ ಮಾಡಿ ಸಿದ್ಧಿಯನ್ನು ಪಡೆದರೋ ಯಾರಿಗೂ ತಿಳಿಯದು ಕೇಳಿದರೆ ಪೂರ್ವಾಶ್ರಮದ ವಾಸನೆಯು ಗೊತ್ತಾಗದಂಥ ಮಾತುಗಳೇ ಉತ್ತರಗಳು. ವಯಸ್ಸು ಯಾವಾಗ ಎಷ್ಟು ಎಂಬುದೂ ಖಚಿತವಿಲ್ಲ. ಸುಮಾರು ಎಂಬತ್ತು ವರ್ಷ ವಯಸ್ಸು ದಾಟಿದವರೂ ಈ ಸ್ವಾಮಿಗಳು ನನ್ನ ಮದುವೆಗೆ ಬಂದಿದ್ದರು ಎಂದು ಹೇಳಿರುವುದುಂಟು. ಬೆಂಗಳೂರು ಹರಿಹರ ರೈಲುಮಾರ್ಗ ಪ್ರಾರಂಭವಾದಾಗ ಅಲ್ಲಿ ಇವರು ಮಣ್ಣು ಹೊತ್ತಿದ್ದೂ ಉಂಟು. ಪಟ್ಟು ಬಿದ್ದು ವಯಸ್ಸೆಷ್ಟು ಎಂದು ಕೇಳಿದರೆ ಈ ಬೆಟ್ಟಗುಡ್ಡಕ್ಕೆ ಎಷ್ಟಾಗಿದೆ ಕೇಳಿಕೊಂಡು ಬಾ ಎಂದು ಹೇಳುತ್ತಿದ್ದ ಉತ್ತರ ಬಳಕೆ ಇದ್ದವರ ಅಂದಾಜಿನಲ್ಲಿ ಸ್ವಾಮಿಗಳಿಗೆ ನೂರ ನಲ್ವತ್ತರ ಅಂದಾಜು ಈ ವಯಸ್ಸಿನಲ್ಲಿಯೂ ಸ್ವಚ್ಛಂದವಾಗಿ ನಡೆದಾಡುವ ಕುಣಿದು ಕುಪ್ಪಳಿಸುವ ಶರೀರ ಸ್ವಾಸ್ತ್ಯ ಮತ್ತು ಯುವ ಮನೋಧರ್ಮ ಹೊಂದಿರುವ ಸ್ವಾಮಿಗಳು ಭಕ್ತಿ ಜ್ಞಾನ ವೈರಾಗ್ಯ ಸಮ್ಮಿಳತ ಪರಿವ್ರಾಜಕ ಎನ್ನುವ ಶ್ರೀ ಎಸ್.ಆರ್.ಕಾಳಿಂಗ ಕೃಷ್ಣ ಅವರ ಮಾತುಗಳು ಸಮರ್ಥನೀಯ ಹಾಗು ಅನ್ವರ್ಥನೀಯವಾದುದು.

ಸ್ವಾಮಿಗಳ ಮಾತುಗಳೇ ವೇದಾಂತ. ಬದುಕಿನ ನಿತ್ಯಸತ್ಯವನ್ನು ಆಧ್ಯಾತ್ಮ ಸಾರದೊಂದಿಗಿನ ಅವರ ಮಾತುಗಳು ನಿತ್ಯಸತ್ಯದಂತಿದ್ದವು. ಕೃಷ್ಣಶಾಸ್ತ್ರಿ ಬದುಕನ್ನು ವೇದಾಂತದ ಒಗಟಿನೊಂದಿಗೆ ಸಮೀಕರಿಸಿದ ಮುಕುಂದೂರು ಸ್ವಾಮಿಗಳ ಮಾತುಗಳು "ಒಂದೇ ಇತ್ತು. ಬಂಧು ಬಳಗ ಎಲ್ಲ ಸೇರಿ ಅದಕ್ಕೊಂದು ಜೊತೆ ಇರ್ಲಿ ಅಂತ ಕಟ್ಟಿದ್ದರು. ಲೋಕದಾಟ? ಎರಡಾಗಿದ್ದು ಮೂರಾಯ್ತು. ಒಳ್ಳೇ ಖುಸಿಯಾಗೇ ಇತ್ತು ಇದ್ದಕ್ಕಿದ್ದಂಗೆ ಹಳೇ ಹದ್ದು ಬಂದು ಕೋಳಿ ಮರೀನ ಹೊತ್ಕೊಂಡು ಹೋದಂಗಾಯ್ತು ಪಾಪ, ಕಾವು ಕೊಟ್ಟು, ಗುಟುಕು ಕೊಟ್ಟು ಸಾಕಿತ್ತು. ತಾಯಿ ಯಾಟೆ ಗುಂಡಿಗೆ ಧಡಕ್ಕಂತು ಕಣ್‌ಮುಚ್ಕಂಡ್ತು. ಆಗಿದ್ನೇನು ಮೊದಲೇ ಒಂದೇ ಒಂದು ಇದ್ದದ್ದು ಕಡೆಗೂ ಒಂದೇ ಉಳೀತು". ಎಂಬ ಸ್ವಾಮಿಗಳ ಪ್ರತಿಮಾತ್ಮಕ ಉತ್ತರದ ಮಾತುಗಳಲ್ಲಿ ಶಾಸ್ತ್ರಿಯವರ ಬದುಕಿನ ಕನ್ನಡಿಯಾಗಿದೆ ಅವರ ವಿವಾಹ, ದಾಂಪತ್ಯ ಜೀವನ, ಮಗನ ಮರಣ, ಪತ್ನಿಯ ಸಾವು, ಕೊನೆಗೂ ಏಕಾಂತ ಬದುಕು ಹೀಗೆ. ಅವರು ಕೊಟ್ಟ ಉಪಮೆ ಸರಳವಾದ ನಿದರ್ಶನ ಮತ್ತು ಸರಳವಾದ ಕಥಾನಕಗಳಿಂದ ಒಟ್ಟು ಜೀವನವನ್ನು ಚೈತನ್ಯ ಪೂರ್ಣವಾಗಿ ಕಟ್ಟಿಕೊಡುತ್ತಾರೆ. ಅಷ್ಟೇ ಅಲ್ಲದೆ ಒಟ್ಟು ಬದುಕಿನ ಏಳು ಬೀಳುಗಳನ್ನು ಇಲ್ಲಿ ಚಿತ್ರಿಸಿರುವ ಬಗೆ ರೂಪಕವಾಗಿ ಗಮನಾರ್ಹವಾಗಿದೆ.

ಶ್ರೀಯುತಸ್ವಾಮಿಗಳ ವ್ಯಕ್ತಿತ್ವದ ಇನ್ನೊಂದು ವಿಶೇಷತೆ ಏನೆಂದರೆ ಯಾರನ್ನೂ ತಮ್ಮ ಅನುಯಾಯಿಗಳಾಗಿರೆಂದು, ಭಕ್ತರಾಗಿರೆಂದು ಹೇಳಿದವರಲ್ಲ. ಊರಿನ ಜನರೆಲ್ಲ ಮಾತಾಡ್ತಾ ಊರಿಂದ ಹೊರ ನಡೆದಾಗ ಸ್ವಾಮಿಗಳು ತಮ್ಮ ಬೆತ್ತದಿಂದ ದಾರಿಗಡ್ಡವಾಗಿ ಗೆರೆ ಎಳೆದರು. 'ಇಲ್ಲಿಂದ ಯಾರೂ ಮುಂದೆ ಬರಬೇಡಿ ನೀವು ಸಂಸಾರವೊಂದಿಗರು ಸನ್ಯಾಸೀನ ಬಹಳ ಹಚ್ಕೊಬಾರ್ದು' ಎಂದು ಹೇಳುವ ಮೂಲಕ ಜನರಿಗೆ ಸಾಂಸಾರಿಕ ಜವಾಬ್ದಾರಿಯನ್ನು ಮೂಡಿಸುವ ಅಪೂರ್ವವ್ಯಕ್ತಿತ್ವ ಇವರದು. ಅಂದರೆ ಸನ್ಯಾಸಿಗಳು ಎಂದರೆ ಸಂಸಾರದ

ವಿರೋಧಿಗಳು ಎಂದರ್ಥವಲ್ಲ. ಅವರವರ ಬದುಕು ಅವರವರಿಗೆ ಇರಲಿ ಎನ್ನುವ ತತ್ವಪಾಲಕರೂ ಕೂಡ ಆಗಿದ್ದರು ಎನ್ನುವುದಕ್ಕೆ ಅವರ ಮೇಲಿನ ಮಾತುಗಳೆ ನಾಶವಾಗಿವೆ.

ಪ್ರಕೃತಿಯ ನಿತ್ಯಸುಂದರ ಸೃಷ್ಠಿಗೆ ಬೆರಗಾಗುತ್ತಾ, ಸೃಷ್ಠಿಯ ಚೇತನಾ ಚೇತನವಸ್ತುಗಳಾನ್ನು ಸಂಬೋದಿಸುವುದು ಇವರ ಸಾಮಾನ್ಯತೆಯಲ್ಲಿ ಅಸಮಾನ್ಯತೆಯನ್ನು ಗುರುತಿಸುವ ಗುಣವಾಗಿದೆ. ಕ್ಷಣಕ್ಷಣಕ್ಕೂ ಪ್ರಕೃತಿಯಲ್ಲಾಗುವ ಬದಲಾವಣೆಗೆ ತಲೆದೂಗುತ್ತಾ, ಪ್ರಕೃತಿಯೊಂದಿಗೆ ಮನುಷ್ಯರನ್ನು ತುಲನೆ ಮಾಡುತ್ತಾ, ತನ್ನಿಂದಲೇ ಎಲ್ಲ ಎಂದು ಮೆರೆಯುವ ಮನುಷ್ಯನ ಅಹಂಕಾರವನ್ನು ಕಟಕಿಯಾಡುತ್ತಾರೆ. ಸೃಷ್ಠಿ ರಹಸ್ಯವನ್ನು ಎಷ್ಟು ಸಹಜವಾಗಿ ಅಲ್ಲೇ ಸಿಕ್ಕಿದ ನೀರುಗುಳ್ಳೆಯನ್ನೇ ಉದಾಹರಿಸಿ ಎಷ್ಟೊಂದು ಸುಲಭವಾಗಿ ಕಣ್ಣಿಗೆ ಕಟ್ಟಿದಂತೆ ಬಿಚ್ಚಿಟ್ಟು ಅವರ ಮಾತುಗಾರಿಕೆಗೆ ತಲೆದೂಗಲೇಬೇಕು. ಹೀಗೆ ಅನುಭಾವಿಗಳು ಭಗವಂತನಲ್ಲಿ ಸಲಿಗೆಯ ಭಕ್ತಿಪಾರಮ್ಯ ಹೊಂದಿದವರು. ಅನುಭಾವಿ ಸ್ವಾಮಿಗಳೂ ಅಷ್ಟೆ. ಆಂಜನೇಯನ ವಿಗ್ರಹವನ್ನು ತೋರಿಸುತ್ತಾ ಸೊಟ್ಟಮೂತಿ ಹನುಮಪ್ಪ ಎಂದೂ, ಮೂಗು ಮೂತಿ ನೆಟ್ಟಗಿದ್ದಿದ್ರೆ ಏನೇನು ಮೆರೀತಿದ್ನೋ ಎಂದೂ ಕರೀಮುಕ್ದ ಸೊಟ್ಮೂತಿ ಚಲುವನೆಂದು ಹೇಳುವುದು ಭಗವಂತನ ಕುರಿತಾಗಿನ ಅತಿಸಲಿಗೆಯ ನಿಂದಾಸ್ತುತಿ ಎನ್ನುವುದು ಮೇಲು ನೋಟಕ್ಕೆ ಕಾಣುವುದು ಆಳದಲ್ಲಿ ಬದುಕಿನ ಸತ್ಯವೇ ಅದಾಗಿದೆ.

ಸ್ವಾಮಿಗಳು ಪವಾಡ ಪುರುಷರೂ ಹೌದು.ಹಾಗಂತ ಯಾರನ್ನೋ ಮೆಚ್ಚಿಸಲು ಮಾಡುವ ಪವಾಡಗಳು ಇವರದಲ್ಲ. ಪವಾಡಕ್ಕಾಗಿ ಪವಾಡ ಮಾಡುವ ಉದ್ದೇಶ ತಂತ್ರ ಇವರಿಗೆ ಇಲ್ಲ. ಒಂಟಿ ಕದವಿರುವ ಕೋಣೆಯಲ್ಲಿ ಒಳಗಿನ ಅಗುಳಿಯನ್ನು ತೆರಯದೇ, ಸ್ವಾಮಿಗಳು ಕೋಣೆಯಿಂದ ಹೊರಟಿರುವುದು ಇವರ ಪವಾಡಕ್ಕೆ ಸಾಕ್ಷಿಯಾಗಿದೆ.

ಒಂದು ರಾತ್ರಿ ಹೇಮಗಿರಿ ಬೆಟ್ಟದಲ್ಲಿ ಶಾಸ್ತ್ರಿಗಳು ಹಾಗೂ ಸ್ವಾಮಿಗಳು ತಂಗಿದ್ದು, ಮುಂಜಾವ ಬಸ್ಸು ಪ್ರಯಾಣ ಕೈಗೊಂಡಾಗ ದಾರಿಯಲ್ಲಿ ಹೆರಿಗೆಬೇನೆಯಲ್ಲಿ ನರಳುತ್ತಿದ್ದ ಮಹಿಳೆಯನ್ನು ಕಂಡದ್ದು, ಬಸ್ಸಿನವರು ಅವಳನ್ನು ಆಸ್ಪತ್ರಯವರೆಗೂ ತಲುಪಿಸಬಹುದೆಂದೂ, ಆಸ್ಪತ್ರೆಯ ಖರ್ಚನ್ನು ಭರಿಸಲಾಗದೆಂದೂ, ಈ ನಡುವೆ ಬಡವಿಯಾದ ಆಕೆಯ ಜವಾಬ್ದಾರಿಯನ್ನು ಬಸ್ಸಿನವರೇ ನೋಡಿಕೊಳ್ಳಬೇಕೆಂದು ನೆರೆದ ಹೆಂಗಸರ ನಡುವೆ ವಾದ–ವಿವಾದ ನಡೆಯುತ್ತಿದ್ದಾಗ ಸ್ವಾಮಿಗಳು ಅಲ್ಲಿಯೇ ಇದ್ದ ಚಿಂದಿ ಕಾಗದವನ್ನು ತರಿಸಿ ಆ ಕಾಗದ ನೂರರ ನೋಟಾಗಿ ಪರಿವರ್ತನೆಮಾಡಿ ಆ ಮಹಿಳೆಯ ನೆರವಿಗೆ ಆ ನೋಟನ್ನು ನೀಡಿದ್ದು ಇದು ಸ್ವಾಮಿಯವರ ಪವಾಡಕ್ಕೆ ಸಾಕ್ಷಿಯಂತೆಕಂಡರು, ಇಲ್ಲಿ ಮಾನವೀಯತೆಯು ಎದ್ದು ಕಾಣುತ್ತದೆ.

ಅಂದರೆ ಪವಾಡ ಮಾಡಿ ಮೆಚ್ಚಸಿದವರನ್ನು ಕೇಳಿದ್ದೇವೆ ಕೆಲವರು ಕಂಡು ಇರಬಹುದು. ಆದರೆ ಪವಾಡದಿಂದ ಕಷ್ಟ ಪರಿಹರಿಸುವ ಗುಣ ಅತ್ಯಂತ ಮಾನವೀಯತೆಯ ಸಂಕೇತವಾಗಿದೆ ಹಾಗಾಗಿಯೆ ಮುಕುಂದ ಸ್ವಾಮಿಗಳ ಬಗೆಗಿನ ಈಕೃತಿ ಅತ್ಯಂತ ಗವಮರ್ನಾಹವಾದ ಕೃತಿಯಾಗಿ ಕಂಡು ಬರುತ್ತದೆ.

ತಮ್ಮ ಹೆಸರನ್ನೇ ಹಿಡಿದು ಆಧ್ಯಾತ್ಮವನ್ನು ಬೋಧಿಸುವ ರೀತಿ ವಿಚಿತ್ರವಾದುದು. ಮುಕುಂದ ಅಂದರೆ ಮೂರು ಕುಂಡಗಳು ಅಂದ್ರೆ ಮೂರು ಸ್ವಾರೆಗಳು. ಈ ಮೂರು ಸ್ವಾರೆಗಳು ಸೇರಿ ಕಣ್ಣು, ಕಿವಿ, ಮೂಗು, ಕೈಕಾಲು ಇರೋ

ಊರು ಮುಕುಂದೂರು. ಒಂದು ಸ್ಥೂಲ, ಒಂದುಸೂಕ್ಷ್ಮ ಶರೀರ ಎಂದರೆ ಈ ಸ್ಥೂಲ ಶರೀರದ ಒಳಗೆ ಇದ್ದು ಇದನ್ನು ಆಟ ಆಡಿಸೋ ಮನಸ್ಸು ಬುದ್ಧಿಯೇ ಈ ಚೈತನ್ಯ ಎನ್ನುವ ಚಿಂತನೆ ಬರೀ ಆಧ್ಯಾತ್ಮವಷ್ಟೇ ಅಲ್ಲದೆ ಸಾಮಾಜಿಕ ಸಂಬಂಧದ ಸಂಕೇತವಾಗಿನೂ ಮುಖ್ಯವಾಗಿದೆ.

ಹೀಗೆ ಹಳ್ಳಿಯ ಮುಗ್ಧರಿಗೆ ಅವರದೇ ವಸ್ತು ವಿಚಾರಗಳನ್ನು ಎತ್ತಿಕೊಂಡು ಅವರದೇ ಭಾಷೆಯಲ್ಲಿ ಅವರದೇ ರೀತಿಯಲ್ಲಿ ವಿಶಿಷ್ಟವಾಗಿ ತತ್ತ್ವಬೋದನೆಯನ್ನು ಕರ್ತವ್ಯ ಪ್ರಜ್ಞೆಯನ್ನು ಒಟ್ಟೊಟ್ಟಿಗೆ ಮೂಢಿಸುತ್ತಿದ್ದುದು ಇವರ ವೈಶಿಷ್ಟ್ಯವಾಗಿತ್ತು. ಆಧ್ಯಾತ್ಮವನ್ನು ನಿತ್ಯಜೀವನದಲ್ಲಿ ಸಾಧಿಸಬೇಕೆಂಬುದೇ ಇವರ ಮಾತಿನ ತಾತ್ಪರ್ಯವಾಗಿರುವುದನ್ನು ಇಲ್ಲಿ ಕಾಣಬಹುದು.

ಸ್ವಾಮಿಗಳ ವೈಚಾರಿಕ ಪಕ್ವತೆಗೆ ಇನ್ನೊಂದು ನಿದರ್ಶನ ಕೊಡಬಹುದು ಒಮ್ಮೆ ಶಾಸ್ತ್ರಿಗಳ ಜೊತೆ ತಮ್ಮ ವಯಸ್ಸಿನ ಬಗ್ಗೆ ಚರ್ಚಿಸುತ್ತಿದ್ದಾಗ, ಸ್ವಾಮಿಗಳು ಹೇಳುವ ಮಾತುಗಳು ವಿಶಿಷ್ಟ ಅರ್ಥವನ್ನು ಒಳಗೊಂಡಿದೆ. " ಜನರು ಶಿವಚಾರ್‌ದೋರ್, ಕೆಲವರು ದೇವಾಂಗದೋರ್, ಇನ್ನೂ ಕೆಲವರುಬ್ರಾಹ್ಮಣರು, ಮತ್ತೆ ಕೆಲವರು ನಾಮದೋರ್, ಅಡ್ಡಗಂಧದೊರ್ ಹೀಗೆ ಒಬ್ರನ್ನ ಕಂಡ್ರೆ ಒಬ್ರು ಮಾರುದೂರ ಹೊಗ್ತಾರೆ ಮಡಿಮೈಲಿಗೆ ಅಂತಾರೆ. ನಗು ಬರ್‍ತೈತೆ, ನಕ್ಕರೆ ಬೈಯ್ತಾರೆ ಎಲ್ಲ ಹುಚ್ಚರಾಟ" ಎಂದು ಜನರ ಮೂಡ ನಂಬಿಕೆಗಳನ್ನು ಬಯಲುಮಾಡುತ್ತಿದ್ದ ಸ್ವಾಮೀಜಿ ಅವರ ವ್ಯಕ್ತಿತ್ವದಲ್ಲಿ ವೈಚಾರಿಕ ಪ್ರಶ್ನೆಯು ಇರುವುದನ್ನು ಕಾಣಬಹುದು.

ಮುಕುಂದ ಸ್ವಾಮಿಗಳ ವಿಚಾರ ಅಪಾರ ಪವಾಡಗಳಲ್ಲಿ ನೋಡುತ್ತ ಹೋದಾಗ, ಈ ಕೃತಿಯ ಲೇಖಕರಾದ "ಬೆಳೆಗೆರೆ ಕೃಷ್ಣಶಾಸ್ತ್ರಿಗಳು ಯಾವುದೇ ಸಿದ್ಧಾಂತವನ್ನು ಪ್ರತಿಪಾದಿಸುವುದಕ್ಕಾಗಿ ಈ ಕೃತಿಯನ್ನು ಬರೆದಿಲ್ಲ. ಸಹಜಾನುಭವ ಬೋಧನೆಯ ರೂಪದಲ್ಲಿ ಆಕೃತಿಗೊಂಡಿದೆ. ಇಲ್ಲಿಯ ಎಲ್ಲ ಪ್ರಸಂಗಗಳು ಅಂತರ್ಭೋದೆಯನ್ನು ಅವಲಂಬಿಸಿವೆ. ಅನೇಕ ಘಟನೆಗಳಿಗೆ ಸಿದ್ಧ ಉತ್ತರ ನೀಡುವುದು ಯಾರಿಗಾದರೂ ಕಷ್ಟ. ಹೊಂದಾಣಿಕೆ ಕಲ್ಪಿಸುವುದು ಇನ್ನೂ ಕಷ್ಟ ಸಾಧ್ಯ. ಆದರೆ ಪ್ರತ್ಯಕ್ಷಾನುಭವ, ಪ್ರಕೃತ್ಯಾನುಭವಗಳು ಈ ಬಗೆಯ ನೆಲೆಗಳ ಆಚೆ ಪ್ರಮಾಣವುಳ್ಳ ಮಹಂತರು". ಎಂಬ ಮಲ್ಲೇಪುರಂ ಅವರ ಅಭಿಪ್ರಾಯ ಅತ್ಯಂತ ಅರ್ಥ ಪೂರ್ಣವಾದ ಹಾಗು ಅಷ್ಟೇಮಹತ್ವದ್ದೂ ಕೂಡ ಆಗಿದೆ.

**ಪರಾಮರ್ಶನ ಗ್ರಂಥಗಳು**


1. ಯೇಗ್ದಾಗೆಲ್ಲಾ ಐತೆ, ಲೇಖಕರು ಬೆಳಗೆರೆ ಕೃಷ್ಣಶಾಸ್ತ್ರಿ, ಅಭಿನವ ಪ್ರಕಾಶನ ಬೆಂಗಳೂರು, 2001
2. ವಿಜಯ ಕರ್ನಾಟಕ ಪತ್ರಿಕೆ, ದಾವಣಗೆರೆ ಅಡಿಷನ್ 10.11.2003
3. ನಾನಿದ್ದು ನನ್ನದೇನಿಲ್ಲ, ಲೇಖಕರು ಶ್ರೀಪಾದ ಪೂಜಾರ್, ಕಾಮಧೇನು ಪುಸ್ತಕ ಭವನ, ಬೆಂಗಳೂರು 2013
4. ಹಾಡೇ ಹಾದಿಯ ತೋರಿತು, ಎಚ್ ಎಸ್ ರಾಘವೇಂದ್ರ ರಾವ್, ಪ್ರಕಾಶಕರು: ಕಾಮಧೇನು ಮಸ್ತಕ ಭವನ, ಬೆಂಗಳೂರು., 2021.
5. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ. (ಲೇ) ಕೀರ್ತಿನಾಥ ಕುರ್ತಕೋಟಿ., ಪ್ರಕಾಶನ : ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ–03., 2009